# ಹಸಿದೊಡಲು

ಓದಿದರೆ ಸಂಕಟವಾಗುವ ಎಲ್ಲ ಸುದ್ದಿಗಳೂ ಭಾರತದಲ್ಲಿ ಇಂದು ಸಹಜ ಘಟನೆಗಳಂತಾಗಿವೆ! ಹೃದಯ ವಿದ್ರಾವಕವಾದ ಇಂಥ ಘಟನೆಗಳು ನಾಗರಿಕ ಸಮಾಜದಲ್ಲಿ ಯಾವ ತಳಮಳವನ್ನೂ ಉಂಟುಮಾಡುತ್ತಿಲ್ಲ ಎನ್ನುವುದೇ ನೋವಿನ ಸಂಗತಿ. ಒಬ್ಬರ ಮನೆಯಲ್ಲಿ ಗೋವಿನ ಮಾಂಸ ಇಟ್ಟಿದ್ದಾರೆ ಎಂದು ಊಹಿಸಿ ಸ್ವಯಂ ಘೋಷಿತ ಗೋರಕ್ಷಕ ಗುಂಪು ಆ ಮನೆಯ ಯಜಮಾನನನ್ನು ಹಾಡುಹಗಲೇ ಹತ್ಯೆ ಮಾಡುತ್ತದೆ. ವಿದ್ಯಾರ್ಥಿಯೊಬ್ಬನನ್ನು ದನದ ಮಾಂಸದ ಕಳ್ಳ ಸಾಗಾಣಿಕೆದಾರ ಎಂದು ಇದೇ 'ಗೋರಕ್ಷಕ'ರ ಗುಂಪು ಅವನ ಬೆನ್ನುಹತ್ತಿ ಗುಂಡಿಟ್ಟು ಕೊಲ್ಲುತ್ತಾರೆ. ರೈಲಿನಲ್ಲಿ ದನದ ಮಾಂಸ ಸಾಗಿಸುತ್ತಿದ್ದಾನೆ ಎಂದು ಹೇಳಿ ಒಬ್ಬ ವಯೋವೃದ್ಧನನ್ನು ಹೀನಾಯವಾಗಿ ಥಳಿಸುತ್ತಾರೆ. ಹಾಗೆಯೇ ದನದ ಕಳ್ಳಸಾಗಣೆ ಮಾಡುತ್ತಿದ್ದನೆಂದು ಭಾವಿಸಿ ಒಬ್ಬ ವೃದ್ಧನನ್ನು ಬೀದಿಯಲ್ಲಿ ಬೆತ್ತಲೆಗೊಳಿಸಿ ಬರ್ಬರವಾಗಿ ದಾಳಿ ಮಾಡುತ್ತಾರೆ. ಆಹಾರವನ್ನು ತಿಂದ ಎನ್ನುವ ಕಾರಣಕ್ಕಾಗಿ ತಿಂದವನನ್ನು ಹತ್ಯೆ ಮಾಡಿರುವುದು ಜಗತ್ತಿನ ದೇಶಗಳಲ್ಲಿ ಬಹುಶಃ ಭಾರತವೇ ಮೊದಲು ಎನಿಸುತ್ತದೆ! ಒಂದು ಸಮುದಾಯದ ಬಗ್ಗೆ ಇರುವ ಅತಾರ್ಕಿಕ ದ್ವೇಷದಿಂದಲೇ ಇವೆಲ್ಲ ಘಟನೆಗಳು ಘಟಿಸುತ್ತಿವೆ.

ಭಾರತದಲ್ಲಿ ನಿರ್ದಿಷ್ಟ ಸಮುದಾಯ ಮತ್ತು ಅವರ ಆಹಾರದ ಬಗ್ಗೆ ಇರುವ ಪೂರ್ವಗ್ರಹವು ಇಂಥ ಕೃತ್ಯಗಳಿಗೆ ಪ್ರೇರಕವಾಗಿದೆ. ಗೋರಕ್ಷಣೆ ಎನ್ನುವ ಹೆಸರಿನಲ್ಲಿ ಸ್ವಯಂ ಘೋಷಿತ ಗೋರಕ್ಷಕರ ಗುಂಪು ತಾವೇ ನ್ಯಾಯಾಲಯವಾಗಿ, ಕಾನೂನು ರೀತ್ಯಾ ಅಪರಾಧವಲ್ಲದ ಅಪರಾಧಕ್ಕಾಗಿ 'ಹತ್ಯೆ' ಎನ್ನುವ ಶಿಕ್ಷೆಯ ಮೂಲಕ 'ನ್ಯಾಯ ವಿತರಣೆ' ಮಾಡುತ್ತಿರುವುದು ಇಂದಿನ ಕರಾಳ ವಿದ್ಯಮಾನವಾಗಿದೆ. ಇಂತಹ 'ಹಿಂಸಾತ್ಮಕ ಪಥದಲ್ಲಿರುವ ಭಾರತವು ನನ್ನಲ್ಲಿ ಅಭಿಮಾನವನ್ನು ಮೂಡಿಸುವುದಿಲ್ಲ!' ಎಂದು ಗಾಂಧಿ ಹೇಳಿದ್ದರು. ಅಂತಿಮವಾಗಿ ಬುದ್ಧ ಮತ್ತು ಗಾಂಧಿಯ ಅಂತಃಕರಣವಿಲ್ಲದ ನಾಡು ಮಾನವತೆಯಿಲ್ಲದ ಮರುಭೂಮಿಯಂತಾಗುತ್ತದೆ. 'ಹೌದು; ನಾನು ಗೋವು ತಿಂದು / ಗೋವಿನಂತಾದವನು / ನೀವು ನೀಡುವ ಮೇವು ತಿಂದು / ನಿಮ್ಮಂಥ ಮನುಷ್ಯನಾಗಲಾರೆ / ಮನುಷ್ಯರನ್ನು ತಿನ್ನಲಾರೆ' (ಎನ್.ಕೆ. ಹನುಮಂತಯ್ಯ) ಇದು ಗೋವು ರಕ್ಷಕರ ದಾಳಿಗೆ ಒಳಗಾದವರು ಅವರಿಗೆ ನೀಡಿದ ಮುಟ್ಟಿ ನೋಡಿಕೊಳ್ಳುವಂತಹ ಉತ್ತರ!

ಆಹಾರ ಎಂಬುದು ಧರ್ಮದಂತೆ ಯಾವುದೇ ವ್ಯಕ್ತಿಯ ವೈಯಕ್ತಿಕ ಆಯ್ಕೆ. ಮತ್ತೊಬ್ಬರ ಆಹಾರ ಕ್ರಮವನ್ನು ಸಾರ್ವಜನಿಕವಾಗಿ ಪ್ರಶ್ನಿಸುವುದು, ಅದಕ್ಕಾಗಿ ತಮಗೆ ಇಷ್ಟವಾಗದ ಆಹಾರ ತಿಂದವನನ್ನು ಶಿಕ್ಷಿಸಬೇಕೆಂದು ಭೂಮಿಯ ಮೇಲಿನ ಯಾವ ನ್ಯಾಯ ಹೇಳಿದೆ? ಇದೊಂದು ನಿರ್ಲಜ್ಜತನದ ನಡವಳಿಕೆಯೇ ಹೊರತು ಮತ್ತೇನೂ ಅಲ್ಲ. ಒಂದು ಸಮುದಾಯ ಸೇವಿಸುವ ಆಹಾರ ಪದ್ಧತಿಯ ಮೇಲೆ ಕ್ರೌರ್ಯ ಎಸಗುವುದು ದೇಶಭಕ್ತಿ ಎಂದಾದರೆ, ನಿಶ್ಚಿತವಾಗಿ ಅವರ ಆಲೋಚನೆಯಲ್ಲಿ ಸರಿಪಡಿಸಲಾಗದ ದೋಷವಿದೆ ಎಂದೇ ಅರ್ಥ. 'ನಿಜವಾದ ಉತ್ತಮ ದೇಶಪ್ರೇಮವೆನ್ನುವುದು ಉನ್ನತವಾದ ನೀತಿಯುಕ್ತ ಭಾವನೆಯೆಂದೂ, ಅವಿವೇಕ ಮತ್ತು ದುಷ್ಟತನಗಳನ್ನು ಖಂಡಿಸುವುದೆಂದೂ ಹೇಳಲಾಗುತ್ತದೆ' ಎಂದು ಲಿಯೊ ಟಾಲ್‌ಸ್ಟಾಯ್ ಹೇಳಿರುವ ಮಾತಿನಂತೆ ಸ್ವಯಂಘೋಷಿತ ಗೋರಕ್ಷಕರ ದುಷ್ಟತನಗಳನ್ನು ಸಾಮೂಹಿಕವಾಗಿ ಖಂಡಿಸಬೇಕಿರುವುದೇ ನಿಜವಾದ ದೇಶಪ್ರೇಮವೆಂದಾಗುತ್ತದೆ. ನಾವು ಸೇವಿಸುವ ಆಹಾರದ ಬಗ್ಗೆ ನಮಗಿರುವ ಶ್ರೇಷ್ಠತೆಯ ಭಾವನೆ, ಇತರರ ಆಹಾರದ ಬಗ್ಗೆಯೂ ಇರಬೇಕು. ಇದು 'ಪರಸ್ಪರ ಸಹನೆಯಲ್ಲ!', 'ಪರಸ್ಪರ ಗೌರವ'. ಇದು ಲೋಕಾರೂಢಿ. ಅಂತಿಮವಾಗಿ ಒಳ್ಳೆಯ ಮನುಷ್ಯನಾಗುವುದು ಎಂದರೆ ಎಲ್ಲ ವೈವಿಧ್ಯವನ್ನು ಗೌರವಿಸುವುದು ಎಂದೇ ಅರ್ಥ.

ಆಹಾರ ಕ್ರಮದಲ್ಲಿ ಒಂದು ಶ್ರೇಷ್ಠ, ಇನ್ನೊಂದು ಕನಿಷ್ಠ ಎನ್ನುವ ವಿವೇಕಹೀನ ವಿಭಜನೆಯನ್ನು ಈ ದೇಶದ ಮೆದುಳಿನಲ್ಲಿ ತುಂಬಿದವರು ಯಾರು? ಆಹಾರದ ಬಗ್ಗೆ ಇರುವ ಕಲ್ಪನೆಗಳೆಲ್ಲ ವೈಯಕ್ತಿಕ ಮಟ್ಟದವು. ಇದನ್ನು ಯಾವುದೇ ಧರ್ಮ ಅಥವಾ ಪಂಥ ಹೇಳಿರಲಾರದು! ನೂರಾರು ಧರ್ಮ, ನೂರಾರು ಸಂಸ್ಕೃತಿ, ನೂರಾರು ಆಹಾರ ಪದ್ಧತಿಗಳಿರುವ ಭಾರತ ನಿಜಕ್ಕೂ ವೈವಿಧ್ಯದ ತೊಟ್ಟಿಲು. ಕರ್ನಾಟಕದಲ್ಲಿರುವ ಒಂದು ಸಮುದಾಯದ ಬೆಡಗಿನವರಿಗೆ 'ಮೇಕೆ' ಅವರ ಅಜ್ಜಿಯ ಸಂಕೇತವಂತೆ! ಆದ್ದರಿಂದ ಆ ಸಮುದಾಯದವರು ಮೇಕೆಯನ್ನು ತಿನ್ನುವುದಿಲ್ಲ! ಹಾಗೆಯೇ ಮಧ್ಯ ಕರ್ನಾಟಕದ ಬುಡಕಟ್ಟಿನ ಒಂದು ಬೆಡಗಿನಲ್ಲಿ ಕೋಳಿಯನ್ನು ಸಾಕುವುದು ಮತ್ತು ತಿನ್ನುವುದು ನಿಷಿದ್ಧ! ಹೀಗೆಂದು ಆ ಸಮುದಾಯದವರು ಮೇಕೆ ಮತ್ತು ಕೋಳಿ ತಿನ್ನುವ ಅನ್ಯ ಸಮುದಾಯದವರ ಮೇಲೆ ಎಂದೂ ಆಕ್ರಮಣ ಮಾಡಿಲ್ಲ! ಮತ್ತೂ ವೈಚಿತ್ರವೆಂದರೆ, ದಕ್ಷಿಣ ಮತ್ತು ಮಧ್ಯ ಕರ್ನಾಟಕದ ಭಾಗದಲ್ಲಿ ನಡೆಯುವ ಕೆಲವು ಜಾತ್ರೆಗಳಲ್ಲಿ ದೇವರಿಗೆ ಬಹಿರಂಗವಾಗಿ ಮಾಂಸಾಹಾರವನ್ನು ಎಡೆ ಇಡುವ ಸಂಪ್ರದಾಯವಿದೆ. ಈ ಮಾಂಸಾಹಾರದ ಎಡೆ ಸಂಪ್ರದಾಯದ ಜಾತ್ರೆಗಳಿಗೆ ಹೋಗುವ ಮಾಂಸಾಹಾರ ಸೇವಿಸದ ಸಮುದಾಯದವರು ಎಂದೂ ಆಕ್ಷೇಪಿಸಿಲ್ಲ! ಇದನ್ನು ವಿರೋಧಿಸಿ ಯಾವ ಘರ್ಷಣೆಯೂ ನಡೆದಿಲ್ಲ. ಹೀಗೆ ಇನ್ನೊಬ್ಬರ ಧಾರ್ಮಿಕ ನಂಬಿಕೆಯನ್ನು ಗೌರವಿಸುವ ಸಭ್ಯತೆಯನ್ನು ಕೆಲವು ಸಮುದಾಯಗಳು ಉಳಿಸಿಕೊಂಡಿವೆ.

ಬಹುಸಂಸ್ಕೃತಿ, ಬಹುಧರ್ಮ ಹಾಗೂ ಬಹು ಆಹಾರ ಪದ್ಧತಿಯನ್ನು ಅರಿಯದ ಮತ್ತು ನಿಸರ್ಗದಲ್ಲಿ ಹಾಸುಹೊಕ್ಕಾಗಿರುವ 'ಆಹಾರ ಸರಪಳಿ'ಯ ಜಾಲದ ಬಗ್ಗೆ ಅರಿವಿಲ್ಲದವರು ನಡೆಸುವ ವಿವೇಚನಾರಹಿತ ಪುಂಡಾಟಕ್ಕೆ ಸಿಕ್ಕಿ ಭಾರತದ ಬಹುತ್ವದ ವ್ಯವಸ್ಥೆ ಶಿಥಿಲಗೊಳ್ಳುತ್ತಿರುವುದನ್ನು ಎಲ್ಲೆಡೆ ಕಾಣುತ್ತಿದ್ದೇವೆ. ಇವೆಲ್ಲ ಸಮಾಜದ ಒಳಗೊಳ್ಳುವ ಸಂಸ್ಕೃತಿಯನ್ನು ಚಿವುಟಿಹಾಕುತ್ತವೆ. ಅಂತಿಮವಾಗಿ ಇಂಥ ಕೃತ್ಯಗಳು ಸಮಾಜದಲ್ಲಿ ಮತಾಂಧರನ್ನು ಸೃಷ್ಟಿಸುತ್ತದೆಯೇ ಹೊರತು, ದೇಶಪ್ರೇಮಿ ಅಥವಾ ಮಾನವ ಪ್ರೇಮಿಗಳನ್ನಾಗಲಿ ಸೃಷ್ಟಿಸುವುದಿಲ್ಲ!

ಇವುಗಳಷ್ಟೆ ಭೀಕರವಾದ ಮತ್ತೊಂದು ಸುದ್ದಿಯೆಂದರೆ, ಯಾರೊ ಕೂಲಿಕಾರ್ಮಿಕನೊಬ್ಬ ದನದ ಮಾಂಸ ತಿಂದನೆಂದು ಹೇಳಿ ಅವನನ್ನು ನಡುಬೀದಿಯಲ್ಲಿ ಕೊಲೆ ಮಾಡಲಾಯಿತು! ಇನ್ನೊಬ್ಬರ ಹಸಿವಿನ ತೀವ್ರತೆಯನ್ನು ತಿಳಿಯಲಾರದವರು ಮಾತ್ರ ಎಸಗಿದ ಹೀನ ಕೃತ್ಯ ಇದು. ಹಸಿದವನಿಗೆ ಕಂಡಿದ್ದೆಲ್ಲಾ ಅನ್ನವಾಗಿ ಕಾಣುತ್ತದೆಯೇ ಹೊರತು, ಅಲ್ಲಿ ಧರ್ಮ, ಶ್ರೇಷ್ಠ, ಕನಿಷ್ಠ ಮುಂತಾದ ತಾರ್ಕಿಕತೆಗಳೆಲ್ಲ ಹಿಂದಕ್ಕೆ ಸರಿಯುತ್ತವೆ. ಹೀಗೆ ಹಸಿವನ್ನು ಪ್ರಶ್ನಿಸಿದವರಿಗೆ ಜೇಡರ ದಾಸಿಮಯ್ಯ 'ಒಡಲುಗೊಂಡವ ಹಸಿವ / ಒಡಲುಗೊಂಡವ ಹುಸಿವ / ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರಾ!' ಎಂದು ಸಮಾಜಕ್ಕೆ ಸವಾಲೆಸೆದ.

**■ ಜಿ.ವಿ. ಆನಂದಮೂರ್ತಿ**

## ಮಾತೇ ಮುತ್ತು

- ಅಭಾವದಿಂದ ವಸ್ತುಗಳ ಮಹತ್ವವು ಗೊತ್ತಾಗುತ್ತದೆ.
  —ಶಿವರಾಮ ಕಾರಂತ
- ನಮ್ಮ ಅಸುರಕ್ಷಿತ ಆಲೋಚನೆಗಳು ನಮಗೆ ಹಾನಿ ಮಾಡಿದಷ್ಟು, ಬದ್ಧ ವೈರಿಯೂ ಮಾಡಲಾರ.
  —ಗೌತಮ ಬುದ್ಧ
- ಸ್ವರ್ಗವೆಂದರೆ ಮತ್ತೇನು ಅಲ್ಲ, ಯಾವಾಗಲೂ ಸಂತೋಷವಾಗಿ ಇರುವವರ ಮನಸ್ಸು.
  —ರಾಮಕೃಷ್ಣ ಪರಮಹಂಸ
- ಜೀವನ ಪ್ರತಿಯೊಬ್ಬ ಜೀವಿಗೂ ದೇವರು ಕೊಟ್ಟ ವರ. ಅದನ್ನು ಅಲ್ಲಗಳೆಯಬೇಡಿ.
  —ಸ್ವಾಮಿ ವಿವೇಕಾನಂದ
- ಉತ್ತಮ ಶಿಕ್ಷಣದ ಉದ್ದೇಶವೆಂದರೆ ಕೇವಲ ಕಲಿಸುವುದಲ್ಲ, ಕಲಿಯುವ ಆಸೆಯನ್ನೂ ಹುಟ್ಟಿಸುವುದು.
  —ಮಹಾತ್ಮ ಗಾಂಧಿ
- ಸ್ನೇಹಿತ ನಿಸರ್ಗ ಕೊಟ್ಟ ಸೋದರ. ಸ್ನೇಹಿತರನ್ನು ಹೊಂದಿರುವವರೇ ನಿಜವಾಗಿ ಧನ್ಯರು.
  —ನಿರಂಜನ